# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ

ಸಿಸಿ ನಂಬರಃ 426/2023

ಪಿರ್ಯಾದಿಃ ಸರಕಾರ

- ವಿರುದ್ಧ -

ಆರೋಪಿಃ 1. ವಿಘ್ನೇಶ್ವರ ನೀಲಪ್ಪ ಗುನಗಾ,
ಪ್ರಾಯಃ 55 ವರ್ಷ, ವೃತ್ತಿಃ ವ್ಯಾಪಾರ,
ಸಾಃ ಕುಂಬಾರಕೇರಿ, ಅಂಕೋಲಾ ತಾಲೂಕು

## ದೋಷಾರೋಪಣೆ

ನಾನು ಪ್ರಶಾಂತ ಬಾದವಾಡಗಿ, ಬಿ.ಎ..,ಎಲ್.ಎಲ್.ಬಿ.,(ಸ್ಪೇ) ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಅಂಕೋಲಾ ಆರೋಪಿಯಾದ ನಿನ್ನ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಮಾಡುತ್ತಿದ್ದೇನೆ..

ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ಕುಂಬಾರ ಕೇರಿಯಲ್ಲಿ ಶ್ರೀ ಶಾಂತಾದುರ್ಗಾ ದೇವಸ್ಥಾನದ ಬಂಡಿ ಹಬ್ಬದ ಸಮಯದಲ್ಲಿ ಫಿರ್ಯಾದಿ–ನಾರಾಯಣ ತಂ. ಗಣಪತಿ ಗುನಗಾ ಇವರ ಅಣ್ಣ ಚಾಸಾ –5 ಉದಯ ಗಣಪತಿ ಗುನಗಾ ಇವರು ದೇವರ ಕಳಶವನ್ನು ತಲೆಯ ಮೇಲೆ ಹೊತ್ತುಕೊಂಡು ಮೆರವಣಿಗೆ ಹೊರಡುವಾಗ ಅಪರಾಧ ಮಾಡುವ ಏಕೋದ್ದೇಶದಿಂದ ಆರೋಪಿಯಾದ ನೀನು ದೇವರ ಕಳಸವನ್ನು ಹಿಂದುಗಡೆಯಿಂದ ಎಳೆದಾಗ ಫಿರ್ಯಾದಿಯು **ಈ ರೀತಿ ಮಾಡುವುದು ಸರಿ ಅಲ್ಲ** ಅಂತಾ ಬುದ್ದಿವಾದ ಹೇಳಿದಕ್ಕೆ, ನೀನು ಫಿರ್ಯಾದಿಗೆ **ನೀನು ಮುಂದಿನ ವರ್ಷ ಬಂಡಿಹಬ್ಬಕ್ಕೆ ಬಾ ಮುಗಿಸಿ ಬಿಡುತ್ತೇನೆ** ಅಂತಾ ಜೀವ ಬೆದರಿಕೆ ಹಾಕಿ ಆ ಮೂಲಕ ಭಾ.ದಂ.ಸಂ.ಕಲಂ 506 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

ದಿನಾಂಕಃ 18-04-2023 ರಂದು ಸಂಜೆ 6-00 ಗಂಟೆ ಸುಮಾರಿಗೆ ಫಿರ್ಯಾದಿ-ನಾರಾಯಣ ತಂ. ಗಣಪತಿ ಗುನಗಾ ಇವರ ಮೇಲೆ ಆರೋಪಿಯಾದ ನೀನು ದ್ವೇಷದಿಂದ ಇದ್ದವರು ಫಿರ್ಯಾದಿಯು ತನ್ನ ಹೆಂಡತಿ ಮಕ್ಕಳೊಂದಿಗೆ ಕಾರ ಮೇಲಾಗಿ ಶ್ರೀ ಕಳಸ ದೇವಸ್ಥಾನದ ಹತ್ತಿರ ಇರುವ ತನ್ನ ಮನೆಯ ಹತ್ತಿರ ಬಂದು ಕಾರಿನಿಂದ ಇಳಿಯುತ್ತಿದ್ದಾಗ ಆರೋಪಿಯಾದ ನೀನು ಇನ್ನೊಬ್ಬ ಆರೋಪಿ ಅಪರಾಧ ಮಾಡುವ ಏಕೋದ್ದೇಶದಿಂದ ಏಕಾಏಕಿ ಫಿರ್ಯಾದಿಯ ಕಾರ ಹತ್ತಿರ ಬಂದವರು ನೀನು ಕಬ್ಬಿಣದ ರಾಡನಿಂದ ತಲೆಯ ಮೇಲೆ ಬೀಸಿ ಹೊಡೆಯುವಾಗ ಫಿರ್ಯಾದಿಯು ತನ್ನ ಬಲಕೈಯನ್ನು ಮೇಲಕ್ಕೆ ಎತ್ತಿ ಹೊಡೆತದಿಂದ ತಪ್ಪಿಸಿಕೊಳ್ಳುವಾಗ ಕಬ್ಬಿಣದ ರಾಡ್ ಫಿರ್ಯಾದಿಯ ಕೈಗೆ ಹೊಡೆತ ಬಿದ್ದು ಕೆಳಕ್ಕೆ ಬಿದ್ದಾಗ, ನಿಮ್ಮ ಪೈಕಿ ಇನ್ನೊಬ್ಬ ಆರೋಪಿ ನೀಲಿ ಮತ್ತು ಬಿಳಿ ಬಣ್ಣದ ಪಟ್ಟಿ ಇರುವ ಕಪ್ಪು ಬಣ್ಣದ ಹೆಲ್ಮೇಟ್ ನಿಂದ ಫಿರ್ಯಾದಿಯ ಮೈಮೇಲೆ ಹೊಡೆದು ಸಾದಾ ಸ್ವರೂಪದ ದುಃಖಾಪತ್‌ಪಡಿಸಿ ಆ ಮೂಲಕ ಭಾ.ದಂ.ಸಂ.ಕಲಂ 324 ಸಹಿತ 34 ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ದೋಷಾರೋಪಣೆ ಇರುತ್ತದೆ.

(ಮೇಲಿನ ಅಪರಾಧಗಳನ್ನು ಆರೋಪಿತರಾದ ನೀವು ಇದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಮತ್ತು ನನ್ನ ಸಂಜ್ಞೆಯತೆಯಲ್ಲಿ ಮಾಡಿದ್ದರಿಂದ ಸದರಿ ಅಪರಾಧಿಕ ಕಲಂಗಳ ವಿಚಾರಣೆಯನ್ನು ಇದೇ ನ್ಯಾಯಾಲಯದಲ್ಲಿ ನಡೆಯಬೇಕೆಂದು ಈ ಹೊತ್ತು ದಿನಾಂಕಃ 19-03-2024 ರಂದು ಆದೇಶಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 19-03-2024 ಪ್ರ ದಂ ನ್ಯಾದಂ, ಅಂಕೋಲಾ.

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ**

ಸಿಸಿ ನಂಬರ 426/2023

ಫಿರ್ಯಾದಿಃ ಸರಕಾರ – ವಿರುದ್ಧ – ಆರೋಪಿ 1. ವಿಘ್ನೇಶ್ವರ ನೀಲಪ್ಪ ಗುನಗಾ,

ಪ್ರ 1. ಮೇಲೆ ಓದಿ ಹೇಳಲಾದ ದೋಷಾರೋಪಣೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರ 2. ಸದರಿ ದೋಷಾರೋಪಣೆಗೆ ನಿಮ್ಮ ಉತ್ತರವೇನು?

ಉತ್ತರಃ

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದ್ದೇನೆಂದು ದೃಢೀಕರಿಸುತ್ತೇನೆ.)

Sd/-

ಅಂಕೋಲಾ (ಪ್ರಶಾಂತ ಬಾದವಾಡಗಿ)

ದಿನಾಂಕಃ 19-3-2024 ಪ್ರ ದಂ ನ್ಯಾದಂ, ಅಂಕೋಲಾ.

ಆರೋಪಿಯ ಸಹಿ